(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)
<u>ಪಾಟೀ ಸವಾಲು: ಶ್ರೀ ಕೆಎಂಆರ್, 1 ಮತ್ತು 3 ನೇ ಎದುರುದಾರ ಪರ ವಕೀಲರಿಂದ</u>

ನಾನು ಈ ಪ್ರಕರಣದಲ್ಲಿ ಮೃತ ಚಂದ್ರಶೇಖರ್ ರವರ ಹೆಂಡತಿಯಾದ ಪೂರ್ಣಿಮರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೂರ್ಣಿಮರವರು ಮರು ಮದುವೆಯಾಗಿರುವುದರಿಂದ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲವೆಂದು ಸಾಕ್ಷಿ ನುಡಿಯುತ್ತಾರೆ. ಮೃತ ಚಂದ್ರಶೇಖರ್ ಏನು ಕೆಲಸ ಮಾಡುತ್ತಿದ್ದರು ಮತ್ತು ಎಷ್ಟು ಹಣವನ್ನು ಸಂಪಾದನೆ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಮೃತ ಚಂದ್ರಶೇಖರ್ ರವರು ಚಾಲನೆ ಮಾಡುತ್ತಿದ್ದ ವಾಹನದ ಚಾಲಕ ಹಾಗೂ ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಮೃತ ಚಂದ್ರಶೇಖರ್ ರವರು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ್ದರು ಎಂದರೆ ಸರಿಯಲ್ಲ. ಮೃತ ಚಂದ್ರಶೇಖರ್ ರವರಿಗೆ ವಾಹನವನ್ನು ಚಾಲನೆ ಮಾಡಲು ಚಾಲನ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಮೃತ ಚಂದ್ರಶೇಖರ್ ರವರ ಅಜಾಗರೂಕತೆಯಿಂತ ವಾಹನ ಚಾಲನೆ ಮಾಡಿಕೊಂಡು ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಎದುರುದಾರರು ತಮ್ಮ ವಾಹನವನ್ನು ಸಂಚಾರ ನಿಯಮಾನುಸಾರ ಚಾಲನೆ ಮಾಡಿದ್ದರೂ ಸಹ ಅವರ ಮೇಲೆ ಸುಳ್ಳು ಮೊಕದ್ದಮೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಚಂದ್ರಶೇಖರ್ ರವರಿಗೆ ಸುಮಾರು ಮೂರು ಲಕ್ಷ ರೂಪಾಯಿಗಳ ವೈದ್ಯಕೀಯ ವೆಚ್ಚವನ್ನು ಭರಿಸಿರುವುದಿಲ್ಲ ಎಂದೆರ ಸರಿಯಲ್ಲ. ಈ ಬಗ್ಗೆ ಯಾವುದೇ ದಾಖಲೆಗಳನ್ನು

ಹಾಜರುಪಡಿಸಿಲ್ಲ ಎಂದರೆ ಸರಿ. ಚಂದ್ರಶೇಖರ್ ರವರು ತಮ್ಮ ತಪ್ಪಿನಿಂದ ವಾಹನವನ್ನು ಚಾಲನೆ ಮಾಡಿ ಅಪಘಾತ ಮಾಡಿಕೊಂಡಿರುವುದರಿಂದ 1 ಮತ್ತು 3 ನೇ ಎದುರುದಾರರ ಯಾವುದೇ ನಷ್ಟ ಪರಿಹಾರವನ್ನು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 3 ನೇ ಎದುರುದಾರರಿಂದ ನಷ್ಟ ಪರಿಹಾರ ಹಣವನ್ನು ಪಡೆಯುವ ಉದ್ದೇಶದಿಂದ ಸುಳ್ಳು ಮೊಕದ್ದಮೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

(ಕುಮಾರ್.ಹೆಚ್.ಎನ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.